ಕೊರೊನಾ ಹಿನ್ನೆಲೆ ಇ-ಅಧಿವೇಶನ ನಡೆಸುವ ಸಾಧ್ಯತೆ

ಆಯ್ಕೆಗಳ ಕುರಿತು ಸ್ಪೀಕರ್, ರಾಜ್ಯಸಭೆ ಸಭಾಪತಿ ಚರ್ಚೆ

ಸೆಂಟ್ರಲ್ ಹಾಲ್‌ನಲ್ಲಿ ಲೋಕಸಭೆ ಕಲಾಪ ನಡೆಸುವ ಬಗ್ಗೆ ಚಿಂತನೆ

ಲೋಕಸಭೆ ಸಭಾಂಗಣದಲ್ಲಿ ರಾಜ್ಯಸಭೆ ಕಲಾಪ ಸಾಧ್ಯತೆ

ಅಧ್ಯಯನಕ್ಕಾಗಿ ಉಭಯ ಅಧಿಕಾರಿಗಳ ನೇಮಕ

# ಇತಿಹಾಸದಲ್ಲೇ ಮೊದಲ ಬಾರಿಗೆ ಸಂಸತ್ ಇ-ಅಧಿವೇಶನ?

ಉ.ವಾ. 2/6/20

ನವದೆಹಲಿ: ಇತಿಹಾಸದಲ್ಲಿ ಇದೇ ಮೊದಲ ಬಾರಿ ಸಂಸತ್ ಅಧಿವೇಶನ 'ಇ-ಅಧಿವೇಶನ'ವಾಗಿ ಮಾರ್ಪಡುವ ಲಕ್ಷಣಗಳು ಗೋಚರಿಸುತ್ತಿವೆ. ಅಂದರೆ, ದೇಶದ ಸಂಸದರು ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಆನ್‌ಲೈನ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚೆ ನಡೆಸುವ ದಿನಗಳು ಸನ್ನಿಹಿತವಾದಂತಿದೆ.

ಆದರೆ, ಅಂದುಕೊಂಡ ಕೂಡಲೇ ಇ-ಅಧಿವೇಶನ ನಡೆಸುವುದು ಸುಲಭವಲ್ಲ, ಆದರೂ ಅಂಥದೊಂದು ಸಾಧ್ಯತೆಯ ಕುರಿತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭೆ ಸಭಾಪತಿ ಹಾಗೂ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಚರ್ಚೆ ನಡೆಸಿದ್ದಾರೆ.

ದೇಶದೆಲ್ಲೆಡೆ ಕೊರೊನಾ ವೈರಸ್ ಸೋಂಕು ಹರಡಿರುವ ಕಾರಣ ಎಂದಿನಂತೆ ಸಂಸತ್ ಅಧಿವೇಶನ ನಡೆಸುವಂತಿಲ್ಲ, ಕಾರಣ, ಇಷ್ಟು ದಿನ ಸಾರ್ವಜನಿಕರಿಗೆ ಸಾಮಾಜಿಕ ಅಂತರದ ಪಾಠ ಹೇಳಿರುವ ಜನಪ್ರತಿನಿಧಿಗಳು, ಈಗ ತಾವೂ ಅದನ್ನು ಪಾಲಿಸಲೇಬೇಕು ಎಂಬ ಸನ್ನಿವೇಶ ಸೃಷ್ಟಿಯಾಗಿದೆ.

## ತಂತ್ರಜ್ಞಾನವೇ ಸವಾಲು

ಅಧಿವೇಶನವು ಮಾರ್ಪಡಣೆಯಲ್ಲಿ ನೇರಪ್ರಸಾರವಾಗುವುದರಿಂದ ಗೌಪ್ಯತೆ ಕಾಯ್ದುಕೊಳ್ಳುವ ಪರಿಸ್ಥಿತಿ ಬರುವುದಿಲ್ಲ. ಹೀಗಾಗಿ ಇ-ಅಧಿವೇಶನ ನಡೆಸುವುದರಿಂದ ಯಾವುದೇ ಸಮಸ್ಯೆ ಎದುರಾಗದು ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಎರಡೂ ಸದನಗಳ ಮುಖ್ಯ ಕಾರ್ಯದರ್ಶಿಗಳು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕಾಗಿ ತಂತ್ರಜ್ಞಾನದ ಸಾಧ್ಯತೆಗಳು ಮತ್ತು ಇತರೆ ವಿಷಯಗಳ ಬಗ್ಗೆ ಅಧ್ಯಯನ ನಡೆಸಲು ಉಭಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

## ಸೆಂಟ್ರಲ್ ಹಾಲ್‌ನಲ್ಲಿ ಲೋಕಸಭೆ ಕಲಾಪ

ಲೋಕಸಭೆಯಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿರುವುದರಿಂದ ಹಾಲ್‌ನಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇದಕ್ಕೆ ಸಾಮಾಜಿಕ ಅಂತರ ಅಡ್ಡಿಯಾಗುತ್ತದೆ. ಹೀಗಾಗಿ, ಲೋಕಸಭೆಯನ್ನು ಸೆಂಟ್ರಲ್ ಹಾಲ್‌ಗೆ ಸ್ಥಳಾಂತರ ಮಾಡುವ ಬಗ್ಗೆ ಚರ್ಚೆಯಾಗಿದೆ. ಹಾಗೆಯೇ, ರಾಜ್ಯಸಭೆ ಕಲಾಪ ವನ್ನು ಲೋಕಸಭೆ ಸಭಾಂಗಣಕ್ಕೆ ಸ್ಥಳಾಂತರ ಮಾಡಲಾಗುತ್ತದೆ. ರಾಜ್ಯಸಭೆ ಯಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇರುವುದರಿಂದ ಲೋಕಸಭೆಗೆ ಸ್ಥಳಾಂತರ ಮಾಡಬಹುದು. ಅಷ್ಟೇ ಅಲ್ಲ, ಇದೇ ವೇಳೆ ಉಭಯ ಸದನಗಳ ಕಲಾಪವನ್ನು ಪರ್ಯಾಯ ದಿನಗಳಂದು ನಡೆಸುವ ಸಾಧ್ಯತೆಗಳ ಬಗ್ಗೆಯೂ ಪರಿಶೀಲನೆ ನಡೆಸುತ್ತಿದ್ದಾರೆ.

## ತಕ್ಷಣಕ್ಕೆ ಇದು ಕಷ್ಟಸಾಧ್ಯ

ಕೊರೊನಾ ವೈರಸ್ ಸೋಂಕಿನ ಸಂದಿಗ್ಧ ಪರಿಸ್ಥಿತಿ ಎದುರಾದ ದಿನದಿಂದಲೂ ಇ-ಅಧಿವೇಶನ ನಡೆಸುವ ಕುರಿತಂತೆ ಸಾಕಷ್ಟು ಬಾರಿ ಚರ್ಚೆ ನಡೆದಿದೆ. ಇದೀಗ ಮುಂಗಾರು ಅಧಿವೇಶನವನ್ನು ಆನ್‌ಲೈನ್ ಮೂಲಕ ನಡೆಸುವ ಬಗ್ಗೆ ಚಿಂತನೆ ನಡೆದಿದೆ. ಆದರೆ, ಇದು ತಕ್ಷಣಕ್ಕೆ ಸಾಧ್ಯವಾಗುವ ಕಾರ್ಯವಲ್ಲ, ಏಕೆಂದರೆ ಇ-ಅಧಿವೇಶನ ನಡೆಸಲು ಸಾಕಷ್ಟು ಪೂರ್ವಸಿದ್ಧತೆ ಬೇಕಾಗುತ್ತದೆ. ಈಗಾಗಲೇ ಬ್ರಿಟನ್ ಮತ್ತು ಮಾಲ್ದೀವ್ಸ್ ಅಧಿವೇಶನಗಳು ಆನ್‌ಲೈನ್ ಮೂಲಕ ಯಶಸ್ವಿಯಾಗಿ ನಡೆದ ಉದಾಹರಣೆಗಳು ನಮ್ಮ ಮುಂದಿರುವ ಕಾರಣ ನಮ್ಮಲ್ಲೂ ಸಮರ್ಪಕ ಪೂರ್ವ ಸಿದ್ಧತೆ ಇದ್ದಲ್ಲಿ ಇ-ಅಧಿವೇಶನ ನಡೆಸುವುದು ಅಸಾಧ್ಯವೇನಲ್ಲ ಎನ್ನಲಾಗಿದೆ.

## ಈಗ ಯಾಕೆ ಚರ್ಚೆ?

ಸದ್ಯ ದೇಶದ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿದ್ದಾರೆ. ಒಂದು ವೇಳೆ ಜುಲೈ-ಆಗಸ್ಟ್‌ನಲ್ಲಿ ಮುಂಗಾರು ಅಧಿವೇಶನ ನಡೆದರೆ, ಇವರು ತಮ್ಮ ತಮ್ಮ ಸ್ಥಳಗಳಿಂದ ಬರುವುದು ಕಷ್ಟಕರ. ಈ ಬಗ್ಗೆ ಹಲವಾರು ಸಂಸದರು ಸ್ಪೀಕರ್ ಮತ್ತು ರಾಜ್ಯಸಭೆ ಸಭಾಪತಿಗಳ ಗಮನಕ್ಕೆ ತಂದಿದ್ದಾರೆ. ಅಲ್ಲದೆ, ಸದ್ಯ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿ [illegible] ಇನ್ನೂ ಪ್ರಮಾಣವಚನವನ್ನೂ ಬೋಧನೆ ಮಾಡಲಾಗಿಲ್ಲ.